ಶ್ರೀ ಬಿ.ಬಿ.ಶಿವಕುಮಾರ್:- ಮೊಬೈಲ್ ಸ್ಕ್ವಾಡ್ ಏನಿದ್ದಾರೆ ಅವರಿಗೆ ತಿಳಿಸತಕ್ಕ ವ್ಯವಸ್ಥೆ ಮಾಡಬಹುದು.

ಅಧ್ಯಕ್ಷರು:- ಅದು ಬಹಳ ಒಳ್ಳೆಯ ಸಲಹೆ.

ಶ್ರೀ ಜಿ.ಬಿ.ಶಿವಕುಮಾರ್:- ಏಕೆಂದರೆ ಅವರು ಯಾವುದೇ ಆಸ್ಪತ್ರೆಯಲ್ಲಿ ಇರಬಹುದು. ಆ ರೀತಿ ಒಂದು ಟೀಮ್ ಆಫ್ ಡಾಕ್ಟರ್ಸ್ ಇರುತ್ತಾರೆ. ಅವರಿಗೆ ತಿಳಿಸಿದರೆ ಒಳ್ಳೆಯದು. ಒಂದು ವೇಳೆ 10-12 ಜನ ಟೆಂಪೋ ಆ್ಯಕ್ಸಿಡೆಂಟಿನಲ್ಲಿ ಸತ್ತಿರುತ್ತಾರೆ. ಆ ಸಂದರ್ಭದಲ್ಲಿ ಸರ್ಕಾರ ಮಾಡಬೇಕಾದ ಕೆಲಸ ಅಂದರೆ.....

ಶ್ರೀ ಸಿ.ಆರ್.ಸಗೀರ್ ಅಹಮದ್:- ಆ ಕೊಠಡಿಗಳಲ್ಲಿ ವಿದ್ಯುಚ್ಛಕ್ತಿ ಸೌಲಭ್ಯ ತುರ್ತಾಗಿ ಇರುವಂತೆ ಮಾಡಬೇಕು.

MR.SPEAKER:- Postmortem is over now. Body is disposed off.

SRI S.SURESH KUMAR:- Post mortem is over. But, the report has not been submitted.

MR.SPEAKER:- He has taken note of it.

ವಿಷಯ:- ವಿಶ್ವಬ್ಯಾಂಕ್ ನೆರವಿನಿಂದ ಶಿಕಾರಿಪುರದ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 51 (212)

ಶ್ರೀ ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1. ವಿಶ್ವಬ್ಯಾಂಕ್ ನೆರವಿನಿಂದ ಶಿಕಾರಿಪುರದ ಆಸ್ಪತ್ರೆಯನ್ನು 100 ಹಾಸಿಗೆಗಳಿಗೆ ಏರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?

2. ಈ ಆಸ್ಪತ್ರೆಗೆ 50,000ಕ್ಕೂ ಹೆಚ್ಚು ಹೊರರೋಗಿಗಳು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಹಾಗಿದ್ದಲ್ಲಿ ಈ ಆಸ್ಪತ್ರೆಯನ್ನು 100 ಹಾಸಿಗೆಗಳಿಗೆ ಏರಿಸುವ ಬಗ್ಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲು ಅಡಚಣೆ ಏನಾದರೂ ಇದೆಯೇ?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

1. ಹೌದು.

2. ಬಂದಿದೆ.

3. ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು ಯೋಜನೆಯ ಮೂರನೇ ಹಂತದಲ್ಲಿ (1997-99) ಅಳವಡಿಸಲಾಗಿದ್ದು ಇದಕ್ಕೆ ಯಾವ ಅಡಚಣೆಗಳಿರುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ತಮಗೆ ಹೇಳಿದೆ, ತಾವು ಆಶ್ವಾಸನೆ ಕೊಟ್ಟಿದ್ದೀರಿ. ಶಿಕಾರಿಪುರ ತಾಲ್ಲೂಕು ಹರಿಜನಗಿರಿಜನರು ಇರುವಂಥ ಮತ್ತು ಅವರಿಗೆ ಮೀಸಲಾಗಿರತಕ್ಕ ಕ್ಷೇತ್ರ. ಅಲ್ಲಿಗೆ ನೂರು ಬೆಡ್ ಆಸ್ಪತ್ರೆ ಆಗಬೇಕೆಂದು ಕೇಳಿದ್ದೆ. ತಮ್ಮ ಉತ್ತರದಲ್ಲಿ 97-98 ಎಂದು ಮುದ್ರಣ ತಪ್ಪಾಗಿರಬಹುದು. 96-97ಕ್ಕೆ ತಕ್ಷಣ ಮಾಡಬೇಕಾದ ಅಗತ್ಯ ಇದೆ ಎಂದು ನಾನು ಹೇಳಿದ್ದೆ.

ಅದೇ ರೀತಿ ಶಿರಾಳಕೊಪ್ಪದಲ್ಲಿ 30 ಬೆಡ್ ಇರುವುದನ್ನು 50 ಬೆಡ್ ಮಾಡಬೇಕು. ಅದಷ್ಟೇ ಮೊದಲನೆಯದು. ಎರಡನೆಯದು, ತಾವು ಅಂಕಿಅಂಶ ಇಲ್ಲೇ ಕೊಟ್ಟಿದ್ದೀರಿ. ಸುಮಾರು 50 ಸಾವಿರಕ್ಕೂ ಹೆಚ್ಚು ರೋಗಿಗಳು ಆಸ್ಪತ್ರೆಗೆ ಬರುತ್ತಿದ್ದಾರೆ ಎಂದು. ಈಗ ಏನಾಗಿದೆ ಎಂದರೆ ಹಳೇಕಾಲದಂತೆ 75 ಸಾವಿರ ರೂಪಾಯಿನ ಔಷಧಿ ಕೊಡುತ್ತಿದ್ದಾರೆ.

ಅಧ್ಯಕ್ಷರು:- ಯಡಿಯೂರಪ್ಪನವರೇ, ನನ್ನದೊಂದು ಪ್ರಶ್ನೆ ನಿಮ್ಮಲ್ಲಿದೆ. ನೀವು ಪ್ರಶ್ನೆ ಕೇಳಿದರೆ ವಿರೋಧಪಕ್ಷದ ನಾಯಕರು ಎಂದು ಹೇಳಿ ಹೆದರಿ ಅವರು ಮಂಜೂರು ಮಾಡುತ್ತಾರೆ. ಅವರೂ ನನ್ನನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ನೀವೂ ನನ್ನ ಕಡೆ ಗಮನ ಕೊಡುವುದಿಲ್ಲ. ನನ್ನ ಕ್ಷೇತ್ರದ ಕೆಲಸಗಳೇ ಆಗುತ್ತಿಲ್ಲ. ಸ್ಕೂಲ್ ಕೇಳಿದರೆ ಗೋವಿಂದೇಗೌಡರು ನಿಯಮ ಹೇಳುತ್ತಾರೆ. ಆಸ್ಪತ್ರೆ ಕೇಳಿದರೆ ಇವರು ಬೇರೆ ಕಥೆಯೇ ಹೇಳುತ್ತಾರೆ. ನೀವೆಲ್ಲರೂ ನನ್ನ ರಕ್ಷಣೆಗೆ ಬರದಿದ್ದರೆ ನನ್ನ ಗತಿ ಏನು ಹೇಳಿ?

ಶ್ರೀ ಬಿ.ಎಸ್.ಯಡಿಯೂರಪ್ಪ:- ನಮ್ಮ ಪರಿಸ್ಥಿತಿ ತಮಗೆ ಗೊತ್ತೇ ಆಗಿಲ್ಲ ಸಾರ್. ನಾನು ಇಲ್ಲಿ ಕುಳಿತು ಇದ್ದದ್ದು ಇದ್ದಹಾಗೆ ಮಾತನಾಡುತ್ತಿದ್ದುದರಿಂದ ನಮ್ಮ ಕ್ಷೇತ್ರದ ಜನ ಸಫರ್ ಮಾಡುತ್ತಿದ್ದಾರೆ. ಅದಕ್ಕಾಗಿ ಬಹಳಷ್ಟು ಮಾತನಾಡುವುದನ್ನು ಕಡಿಮೆ ಮಾಡಿದ್ದೇನೆ ಈಗ. ಏಕೆಂದರೆ ಮಾತನಾಡುವುದರಿಂದಲೂ ಕೆಲಸ ಆಗುವುದಿಲ್ಲ. ಕ್ಷೇತ್ರದ ಜನ ಸಫರ್ ಆಗುತ್ತಾರೆ. ಸುಮ್ಮನಿದ್ದರೆ ಕ್ಷೇತ್ರದ ಜನಕ್ಕೆ ಒಳ್ಳೆಯದಾಗುತ್ತೇನೋ ಎಂದು ನಾನು ಈಗ ಮೌನ ಆಚರಣೆ ಶುರು ಮಾಡಿದ್ದೇನೆ. ಆರೋಗ್ಯ ಸಚಿವರಲ್ಲಿ ಒಂದೇ ವಿನಂತಿ, ದಯಮಾಡಿ ಅದನ್ನು 100 ಬೆಡ್ ಆಸ್ಪತ್ರೆಯಾಗಿ ಈ ವರ್ಷದಿಂದ ಪ್ರಾರಂಭ ಮಾಡುವಂಥಾದ್ದು. ಶಿರಾಳಕೊಪ್ಪಕ್ಕೂ 50 ಬೆಡ್ ಹಾಸ್ಪಿಟಲ್ ಮಾಡಿ. ಎರಡನೆಯದು 50,000 ರೋಗಿಗಳು ಬರುತ್ತಿದ್ದಾರೆ. ತುಂಬಾ ಸಮಸ್ಯೆ ಇದೆ. ಇವರು ಹಳೇ ಕಾಲದಲ್ಲಿ 75 ಸಾವಿರ ರೂಪಾಯಿನ ಔಷಧಿ ಕೊಡುತ್ತಿದ್ದರು. ತಾತ್ಕಾಲಿಕವಾಗಿ ದಯಮಾಡಿ ಎರಡು ಲಕ್ಷ ರೂಪಾಯಿನಷ್ಟು ಬೇರೆ ಏನಾದರೂ ಔಷಧಿಯನ್ನು ಅಡ್ಜಸ್ಟ್ ಮಾಡಿ ಕಳುಹಿಸಿಕೊಡದೇ ಇದ್ದರೆ ಕಷ್ಟವಾಗುತ್ತದೆ. ನಾನು ಮೊನ್ನೆ ಹೋದಾಗಲೂ ಆಸ್ಪತ್ರೆಯಲ್ಲಿ ನೂರಾರು ಜನ ರೋಗಿಗಳು ರಸ್ತೆಯಲ್ಲಿ ನಿಂತಿದ್ದರು. ಯಾವುದೇ ಔಷಧಿ ಇಲ್ಲ. ದಯಮಾಡಿ ಇದಕ್ಕೆ ನೇರವಾಗಿ ಹೇಳಬೇಕು.

ಡಾ.ಹೆಚ್.ಸಿ.ಮಹದೇವಪ್ಪ:- ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ

ನಾಯಕರು ನನ್ನ ಜೊತೆಯಲ್ಲಿ ದೂರವಾಣಿಯಲ್ಲಿ ಮಾತನಾಡಿದ್ದಾರೆ. ಹೆಚ್ಚು ಜನ ರೋಗಿಗಳು ಅಲ್ಲಿ ಬರುತ್ತಿದ್ದಾರೆ. ಅಲ್ಲಿ ಕೊಡುತ್ತಾ ಇರತಕ್ಕ ಹಣ ಸಾಕಾಗುವುದಿಲ್ಲ ಎಂದು. ಸರ್ಕಾರದ ಆದೇಶ ಇದೆ. ಪಿ.ಎಚ್.ಸಿಗೆ ಕಮ್ಯುನಿಟಿ ಹೆಲ್ತ್ ಸೆಂಟರ್‌ಗೆ ಮತ್ತು ತಾಲ್ಲೂಕು ಆಸ್ಪತ್ರೆಗೆ ಇಷ್ಟಿಷ್ಟೇ ನಿಗಧಿಯಾದಂಥ ಹಣ ಕೊಡಬೇಕೆಂದಿದೆ. ಆದರೂ ಕೂಡ ಮಾನ್ಯ ವಿರೋಧಪಕ್ಷದ ನಾಯಕರು ನನಗೆ ದೂರವಾಣಿ ಮೂಲಕ ಯಾವುದಾದರೂ ರೂಪದಲ್ಲಿ ಹೆಚ್ಚು ಔಷಧಿಯನ್ನು ಕೊಡಬೇಕೆಂದು ನನ್ನನ್ನು ಕೇಳಿದ್ದಾರೆ. ನಾನು ಈಗಾಗಲೇ ನಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಮತ್ತು ವಿಶ್ವಬ್ಯಾಂಕಿನ ನೆರವಿನ ಅಡಿಯಲ್ಲಿ.....

ಶ್ರೀ ಹೆಚ್.ಶಿವಪ್ಪ:- ವಿರೋಧಪಕ್ಷದ ಕ್ಷೇತ್ರಗಳಿಗೆ ರೂಲ್ಸ್‌ಗಳನ್ನು ರಿಲ್ಯಾಕ್ಸೇಷನ್ ಮಾಡಿದ್ದೀರಾ?

ಶ್ರೀ ಬಿ.ಎಸ್.ಯಡಿಯೂರಪ್ಪ:- ನೀವು ಷುಗರ್ ಫ್ಯಾಕ್ಟರಿ ನಡೆಸಿಕೊಂಡು ನೆಮ್ಮದಿಯಿಂದ ಇದ್ದೀರಿ. ನಮ್ಮ ಪರಿಸ್ಥಿತಿಯನ್ನು ತಾವು ಅರ್ಥಮಾಡಿಕೊಳ್ಳಿ.

ಅಧ್ಯಕ್ಷರು:- ಶಿವಪ್ಪನವರೇ, ನಿಮಗೇನು ಸಂಬಂಧ ಇದೆ ಇದು?

ಡಾ. ಎಚ್.ಸಿ.ಮಹದೇವಪ್ಪ:- ಮಾನ್ಯ ಅಧ್ಯಕ್ಷರೆ, ರಾಜ್ಯದ ಆಸ್ಪತ್ರೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದಕ್ಕೆ ಬೇಕಾದ ವಿಶ್ವಬ್ಯಾಂಕಿನ ಯೋಜನೆಯನ್ನು ಈಗಾಗಲೇ ಪ್ರಧಾನಮಂತ್ರಿಗಳು ಉದ್ಘಾಟನೆ ಮಾಡಿ ಹೋಗಿದ್ದಾರೆ. ರಾಜ್ಯದ ಎಲ್ಲಾ ತಾಲ್ಲೂಕು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದಕ್ಕೆ ಮೂರು ಹಂತಗಳಲ್ಲಿ ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದರಲ್ಲಿ ಮೊದಲನೇ ಹಂತದಲ್ಲಿ ಇಷ್ಟು ಎಂದು ಮಾಡಿದ್ದೇವೆ. ಸನ್ಮಾನ್ಯ ವಿರೋಧಿಪಕ್ಷದ ನಾಯಕರ ಕ್ಷೇತ್ರದಲ್ಲೂ ಕೂಡ ಅಂಥದ್ದೇ ಕೆಲಸವನ್ನು ಮಾಡಿದರೂ ಕೂಡ 1997-98ನೇ ಸಾಲಿಗೆ ಅದು ಸೇರ್ಪಡೆಯಾಗಿದೆ. ಅದನ್ನು ಸ್ವಲ್ಪ ಬೇಗ ಮಾಡಿ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳುತ್ತಿದ್ದಾರೆ. ಎಲ್ಲರೂ ಕೂಡ ಅದೇ ತರಹ ಹೇಳಿದರೆ ಕೆಲಸವನ್ನು ಮಾಡುವುದು ಕಷ್ಟವಾಗುತ್ತದೆ.

ಅಧ್ಯಕ್ಷರು:- ಅವರಿಗೆ ಆದ್ಯತೆ ಕೊಡಿ.

ಡಾ.ಎಚ್.ಸಿ.ಮಹದೇವಪ್ಪ:- ಆದರೂ ವಿರೋಧಪಕ್ಷದ ನಾಯಕರು ಹೇಳಿರುವುದರಿಂದ ಅದನ್ನು ಪರಿಶೀಲಿಸಿ ವಿಶೇಷವಾಗಿ ಎಂದು ಪರಿಗಣನೆ ಮಾಡಿ ಮಾಡುತ್ತೇನೆ.

ವಿಷಯ:- ವಿಜಾಪುರ ಜಿಲ್ಲೆಯ ಆಲಮಟ್ಟಿಯ ಜವಹರ ನವೋದಯ ಶಾಲೆಯಲ್ಲಿ ಉಪನ್ಯಾಸಕರ ಕೊರತೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 52 (42)